**OS 283/12**

ಸಾಕ್ಷಿಯನ್ನು ಕರೆಯಿಸಲಾಯಿತು ಪ್ರ.ವ. ಬೋದಿಸಲಾಯಿತು ದಿಃ **29-08-15**

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದ**

ದಾವೆಯಲ್ಲಿ ಎಷ್ಟು ಶೆಡ್ಯೂಲ್‌ಗಳನ್ನಾಗಿ ಮಾಡಿದ್ದೇನೆಂದು ನನಗೆ ಗೊತ್ತಿಲ್ಲ. 9 ಅಂಕಣದ ಮನೆಯ ವಿಸ್ತೀರ್ಣ ಗೊತ್ತು ಪೂರ್ವಪಶ್ಚಿಮ 22½ ಅಡಿ ಉತ್ತರ ದಕ್ಷಿಣ 30 ಅಡಿ. 9 ಅಂಕಣದ ಮನೆ ಇಷ್ಟೇ ವಿಸ್ತೀರ್ಣ ಇದೆ ಎನ್ನುವ ಬಗ್ಗೆ ದಾಖಲೆಯನ್ನು ಹಾಜರುಮಾಡಿದ್ದೇನೆ. 22½X30 ಅಡಿವಿಸ್ತೀರ್ಣ ಇದೆ ಎಂದು ನಾನು 22-10-1990ರ ಕ್ರಯಪತ್ರವನ್ನು ನೋಡಿ ಹೇಳುತ್ತಿದ್ದೇನೆ. ಸದರಿ ಪತ್ರ ನನ್ನ ತಾತನಿಂದ ನನ್ನ ತಂದೆಗೆ ಆಗಿರುತ್ತದೆ, ನನ್ನ ತಾತ ಚೆನ್ನಮಲ್ಲಪ್ಪ, ನನ್ನ ತಾತ ಚೆನ್ನಮಲ್ಲಪ್ಪನಿಗೆ ನಾಲ್ಕು ಜನ ಅಣ್ಣತಮ್ಮಂದಿರು ಅವರಿಗೆ ಹೆಣ್ಣು ಮಕ್ಕಳು ಇರುವುದಿಲ್ಲ. 1ನೇಯವರು ಚಿಕ್ಕಮಲ್ಲಪ್ಪ, 2ನೇಯವರು ಮಾದಪ್ಪ , 3ನೇಯವರು ಚೆನ್ನಮಲ್ಲಪ್ಪ , 4ನೇಯವರು ಹಲಗಪ್ಪ. ಗಿರಿಜಮ್ಮ ಎನ್ನುವ ಒಬ್ಬ ಮಗಳು ಇರುತ್ತಾರೆ ಎಂದರೆಸರಿ. 9 ಅಂಕಣದ ಮನೆ ಪೂರ್ವಕಾಲದಿಂದಲೂ ಹಾಗೆ ಇದೆ ಅದು ಬದಲಾಗಿಲ್ಲ. ಅದರ ವಿಸ್ತೀರ್ಣ 22X30 ಇದೆ. ನನ್ನ ತಾತ ಚೆನ್ನಮಲ್ಲಪ್ಪನ ಅಣ್ಣತಮ್ಮಂದಿರು ಸದರಿ ಮನೆಯನ್ನು ಭಾಗ ಮಾಡಿಕೊಂಡಿರುತ್ತಾರೆ. ಸದರಿ ಮನೆ ನಾಲ್ಕು ಜನರ ಭಾಗಕ್ಕೆ ಬಂದಿರುತ್ತದೆ. ನಾವು ಮೂರು ಜನರು ತೆಗೆದುಕೊಂಡಿದ್ದೇವೆ. ನಾಲ್ಕು ಜನರು ಭಾಗವಾದ ಬಗ್ಗೆ 22-10-90 ರ ಪತ್ರವನ್ನು ಹಾಜರುಮಾಡಿದ್ದೇನೆ. ಪಡಸಾಲೆ ಪುದು ಇತ್ತು ಎನ್ನುವ ಬಗ್ಗೆ ದಿಃ 22-10-90 ರ ಪತ್ರವನ್ನು ಹಾಜರುಮಾಡಿದ್ದೇನೆ.

ಮನೆ ಮೂರು ಜನರಿಗೆ ಭಾಗವಾಗಿರುತ್ತದೆ ಎಂದರೆ ಸರಿ , ಹಲಗಪ್ಪ , ಮಾದಪ್ಪ , ಚೆನ್ನಮಲ್ಲಪ್ಪನಿಗೆ ಭಾಗವಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಲಗಪ್ಪ ಮತ್ತು ಚೆನ್ನಮಲ್ಲಪ್ಪನಿಗೆ ಭಾಗವಾಗಿರುತ್ತದೆ ಎಂದು ತಿಳಿಸುತ್ತಾರೆ. ಪುಟ್ಟಮಲ್ಲಪ್ಪನಿಗೆ ಮತ್ತು ಮಾದಪ್ಪನಿಗೆ ಭಾಗವನ್ನು ಕೊಟ್ಟಿರುತ್ತಾರೆ ಅವರಿಗೆ ಅದೇ ಮನೆಯಲ್ಲಿ ಕೊಟ್ಟಿರುತ್ತಾರೆ. ಮಾದಪ್ಪನಿಗೆ ಉತ್ತರದ ಕಡೆ ಪೂರ್ವಪಶ್ಚಿಮ 22 ಅಡಿ ಉತ್ತರ ದಕ್ಷಿಣೆ 17 ಅಡಿಯನ್ನು ಕೊಟ್ಟಿರುತ್ತಾರೆ ಎಂದರೆ ಸರಿ, ಅದರಿಂದ ಮದ್ಯಭಾಗದಲ್ಲಿ ಹಲಗಪ್ಪನಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಅದರ ತೆಂಕಲಾಗಿ ಚೆನ್ನಮಲ್ಲಪ್ಪನಿಗೆ ಕೊಟ್ಟಿರುತ್ತಾರೆ ಎಂದರೆ ಸರಿ, ಮಾದಪ್ಪನಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ.

ಪ್ರತಿವಾದಿ ಮಹದೇವಪ್ಪನಿಗೆ ಸಾಕು ತಾಯಿ ಕೆಂಪಮ್ಮ ಹಲಗಪ್ಪನ ಮಗ ನಂಜಪ್ಪನಿಂದ ಹಲಗಪ್ಪನ ಭಾಗಕ್ಕೆ ಬಂದಿದ್ದ ಸ್ವತ್ತಿನಲ್ಲಿ ಅರ್ಧಭಾಗವನ್ನು ದಿಃ 10-5-1963 ರಂದು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಮಾದಪ್ಪನವರು ತಮ್ಮ ಭಾಗಕ್ಕೆ ಬಂದ ಆಸ್ತಿಯನ್ನು ರಿಜಿಸ್ಟರ್ ವಿಲ್ ಮುಖೇನ ಪ್ರತಿವಾದಿ ಮಹಾದೇವಪ್ಪನಿಗೆ